

# ಚೆಣ್ಣರ ಮೊಗದಲ್ಲಿ ಬಣ್ಣದ ಮಾಸ್ಕ್

**ಕೊರೊನಾ ವೈರಸ್‌ನಿಂದ ರಕ್ಷಿಸಿಕೊಳ್ಳಲು ಇದೀಗ ಮಾಸ್ಕ್ ಧರಿಸಬೇಕಾದುದು ಕಡ್ಡಾಯ. ಬಣ್ಣಬಣ್ಣದ ಮಾಸ್ಕ್‌ಗಳು ಚೆಣ್ಣರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ. ಅಂದಹಾಗೆ ಫ್ಯಾಷನಬಲ್ ಮಾಸ್ಕ್ ಮಾರುಕಟ್ಟೆಗೆ ಬಂದಿದ್ದು ಆರೋಗ್ಯ, ಫ್ಯಾಷನ್ ಎರಡನ್ನೂ ತಳಕು ಹಾಕುವಂತಿವೆ.**

■ **ಪವಿತ್ರಾ ರಾಘವೇಂದ್ರ ಶೆಟ್ಟಿ**

ಪಕ್ಕದ್ಮನೆಯಲ್ಲಿರುವ ತಾಯಿಯೊಬ್ಬರು ಆರು ವರ್ಷದ ಮಗುವಿಗೆ ಮಾಸ್ಕ್ ಹಾಕುವುದಕ್ಕೆ ಹರಸಾಹಸ ಪಡುತ್ತಿದ್ದರು. ಚಾಕೊಲೇಟ್, ಬಿಸ್ಕೆಟ್‌ನ ಆಮಿಷವೊಡ್ಡಿದರೂ ಮಗು ಸುತರಾಂ ಒಪ್ಪುತ್ತಿರಲಿಲ್ಲ. ಕೊನೆಗೆ 'ನೋಡೋ ಈ ಮಾಸ್ಕ್ ಹಾಕಿಕೊ, ಆಮೇಲೆ ಇದರ ಮೇಲೆ ನಿನ್ನ ಫೇವರೆಟ್ ಕಾರ್ಟೂನ್ ಚಿತ್ರ ಬಿಡಿಸಿ ಕೊಡುತ್ತೇನೆ' ಎಂದು ಹೇಳಿದ ಕೂಡಲೇ ಮಗು ಕಣ್ಣರಳಿಸಿ ತನ್ನ ಮೂತಿಗೆ ಮಾಸ್ಕ್ ಅನ್ನು ಕಟ್ಟಿಕೊಂಡಿತು.

ಕೊರೊನಾ ವೈರಸ್ ಹಿನ್ನಲೆ ಈಗ ಮಾಸ್ಕ್‌ಗಳಿಗೆ ಭಾರೀ ಬೇಡಿಕೆ ಶುರುವಾಗಿದೆ. ಮಾರುಕಟ್ಟೆಯಲ್ಲಿ ನಾನಾ ತರಹದ ಮಾಸ್ಕ್‌ಗಳು ಫ್ಯಾಷನ್ ಆಗಿವೆ. ವೈರಸ್‌ನ ಕಾರಣದಿಂದ ಈಗ ಎಲ್ಲರ ಮುಖದ ಮೇಲೂ ಮಾಸ್ಕ್ ರಾರಾಜಿಸುತ್ತಿದೆ. ಸ್ವಲ್ಪ ಕಿರಿಕಿರಿ ಅನಿಸಿದರೂ ದೊಡ್ಡವರು ವೈರಸ್ ಹೆದರಿಕೆಯಿಂದ ತಮ್ಮ ಮೂಗು ಮೂತಿಯನ್ನು ಮುಚ್ಚಿಕೊಳ್ಳುತ್ತಿದ್ದಾರೆ. ಆದರೆ ಮಕ್ಕಳ ಮುಖದ ಮೇಲೆ ಈ ಮಾಸ್ಕ್ ಹಾಕುವುದು ತಾಯಂದಿರಿಗೆ ತುಂಬಾ ಕಷ್ಟದ ಕೆಲಸ. ಕಸ ತೆಗೆದುಕೊಂಡು ಹೋಗುವವನು ಬಂದಾಗ, ತರಕಾರಿ ಗಾಡಿ ಬಂದಾಗ ಗೇಟ್ ತೆಗೆಯುತ್ತಲೆ ಹೊರಗಡೆ ಓಡೋಡಿ ಬರುವ ಮಗುವಿಗೆ ಮಾಸ್ಕ್ ಹಾಕಿಕೊಳ್ಳು ಎಂದರೆ ಮುಖ ತಿರುಗಿಸಿ ಓಡಿ ಬಿಡುತ್ತದೆ. ಇಷ್ಟು ಸಮಯ ಇಲ್ಲದ ಈ ಮಾಸ್ಕ್ ಈಗ ಅನಿವಾರ್ಯ ಆಗಿಬಿಟ್ಟಿದೆ. ಅಲ್ಲದೆ ಮಕ್ಕಳಿಗೆ ತಾಯಂದಿರ ಕಾಳಜಿ ಅರ್ಥವಾಗುವುದಿಲ್ಲ!

ಈಗ ಲಾಕ್ ಡಾನ್ ಸ್ವಲ್ಪಮಟ್ಟಿಗೆ ಸಡಿಲವಾಗಿದೆ. ಇಷ್ಟು ದಿನ ಮನೆಯಲ್ಲಿಯೇ ಕುಳಿತಿದ್ದ ಮಕ್ಕಳನ್ನು ಒಂದು ಸುತ್ತು ಹೊರಗಡೆ ಕರೆದುಕೊಂಡು ಹೋಗುವ ಎಂದು ಕೈಗೆಲ್ಲಾ ಸ್ಯಾನಿಟೈಸರ್ ಹಾಕಿ ಇನ್ನೇನು ಮಾಸ್ಕ್ ಹಿಡಿದುಕೊಂಡು ಬಂದರೆ 'ನನಗೆ ಇದು ಬೇಡ' ಎನ್ನುವ ರಾಗ ಶುರುವಾಗುತ್ತೆ. ಎಲ್ಲೆ ಹೋಗಲಿ ಎಲ್ಲೆ ಬರಲಿ ಮುಖಕ್ಕೊಂದು